ರಾಜ್ಯದಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ಹೆರಿಗೆ ಭತ್ಯ ಕೊಡುವ ಬಗ್ಗೆ

೧೧೪೬. ಶ್ರೀ ಐ.ಬಿ. ಶಂಕರ್ (ಚಿಕ್ಕ ಮಂಗಳೂರು).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆ ಭತ್ಯ ಕೊಡುವ ಬಗ್ಗೆ (ನಿಯಿತ ಹೇರುವ) ಹಿಂದಿನ ಅಧಿವೇಶನದಲ್ಲಿ ಕೆಲವೇ ದಿನಗಳಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ಹೆರಿಗೆ ಭತ್ಯ ಯೋಜನೆಯ ಪ್ರಯೋಜನವನ್ನು ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವಿಸ್ತರಿಸಲು ಬರುವುದಿಲ್ಲ ಏಕೆಂದರೆ ಈ ಮಹಿಳೆಯರು ಪ್ಲಾಂಟೇಷನ್ ಲೇಬರ್ ಕಾಯಿದೆ (೧೯೫೧)ಗೆ ಅಡಿಯಲ್ಲಿ ಹೆರಿಗೆ ಭತ್ಯದ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಆ) ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಎರಡೂ ಕಡೆಯಿಂದ ಹೆರಿಗೆಯ ಪ್ರಯೋಜನ ಕೊಡುವುದು ಉಚಿತವಲ್ಲವಾದ್ದರಿಂದ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ.

ಹೊಸ ದುರ್ಗದಲ್ಲಿ ಒಳಚರಂಡಿ ವ್ಯವಸ್ಥೆ ಬಗ್ಗೆ

೧೧೪೮. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ಪಟ್ಟಣದಲ್ಲಿ ನೈರ್ಮಲ್ಯ ಸುಧಾರಿಸಲು ಒಳಚರಂಡಿ ವ್ಯವಸ್ಥೆ ಪುರಸಭೆಯಿಂದ ಜಾರಿಗೆ ತರಲು ಸಾಧ್ಯವೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೆ ?

ಇ) ಹಾಗಿದ್ದಲ್ಲಿ ಇದರ ಅನುಷ್ಠಾನಕ್ಕೆ ಬೇಕಾಗುವ ಹಣವನ್ನು ಹೊಸದುರ್ಗ ಪುರಸಭೆಗೆ ಸರ್ಕಾರದವರು ನೀಡುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ವಿರಾಜಪೇಟೆ ನ್ಯಾಯಾಲಯ ಕಟ್ಟಡದ ನಿರ್ಮಾಣದ ಬಗ್ಗೆ

೧೧೬೨. ಶ್ರೀ ಸುಮನಸಂತ (ವಿರಾಜಪೇಟೆ).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ನ್ಯಾಯಾಲಯ ಸಮುಚ್ಚಯ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ವಿಳಂಬ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಕಟ್ಟಡಕ್ಕೆ ನಿಗದಿ ಪಡಿಸಲಾದ ಹಣವೆಷ್ಟು ?

ಇ) ಹೊಸ ಕಟ್ಟಡ ನಿರ್ಮಾಣ ಹಂತದಲ್ಲಿರುವಾಗ ಹಳೇ ಕಟ್ಟಡವನ್ನು ಬಿಟ್ಟು ಬಾಡಿಗೆ ಕಟ್ಟಡಕ್ಕೆ ತೆರಳಲು ಕಾರಣವೇನು ?

ಈ) ಸದರಿ ಕಟ್ಟಡ ಪೂರ್ಣಗೊಂಡು ನೂತನ ಕಟ್ಟಡದಲ್ಲಿ ಕಾರ್ಯಾರಂಭ ಮಾಡಲು ಇನ್ನೆಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು). --

ಅ) ಇಲ್ಲ.

ಆ) ೧೯೮೫-೮೬ರಲ್ಲಿ ೪,೫೦,೦೦೦ – ರೂಪಾಯಿಗಳು.

೧೯೮೬-೮೭ರಲ್ಲಿ ೫,೦೦,೦೦೦ – ರೂಪಾಯಿಗಳು.

ಇ) ಈಗಿರುವ ನ್ಯಾಯಾಲಯ ಕಟ್ಟಡದ ಒಂದು ಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯದ ಕಟ್ಟಡ ಮತ್ತು ಉಗ್ರಾಣ ಇವುಗಳನ್ನು ಕೆಡಹಿ ಹೊಸ ಕಟ್ಟಡಗಳನ್ನು ನಿರ್ಮಿಸಬೇಕಾಗಿದೆ. ಲೋಕೋಪಯೋಗಿ ಇಲಾಖೆಯ ಉಗ್ರಾಣ ಮತ್ತು ಖಾಲಿ ಜಾಗ ಇವುಗಳನ್ನು ಹೊಸ ನ್ಯಾಯಾಲಯ ಕಟ್ಟಡದ ನಿರ್ಮಾಣಕ್ಕಾಗಿ ಬಿಟ್ಟು ಕೊಟ್ಟಿರುವ ಕಾರಣದಿಂದಾಗಿ ಈಗಿನ ನ್ಯಾಯಾಲಯ ಕಟ್ಟಡವನ್ನು ಲೋಕೋಪಯೋಗಿ ಉಪವಿಭಾಗವಾಗಿ ಪರಿವರ್ತಿಸಿ ನ್ಯಾಯಾಲಯವನ್ನು ಬೇರೆ ಬಾಡಿಗೆ ಕಟ್ಟಡಕ್ಕೆ ಅಂದರೆ ಮಹಿಳಾ ಸಮಾಜ ವಿರಾಜಪೇಟೆ ಇಲ್ಲಿಗೆ ವರ್ಗಾಯಿಸಲಾಗಿದೆ.

ಈ) ಸುಮಾರು ೨½ ವರ್ಷ.

ಗುಳೇದಗುಡ್ಡ ನಗರಕ್ಕೆ ಮಲಪ್ರಭಾ ನದಿಯಿಂದ ಕುಡಿಯುವ ನೀರಿನ ಪೂರೈಕೆ ಬಗ್ಗೆ

೧೬೫೫. ಶ್ರೀ ನಂಜಯ್ಯನಮಠ್ (ಗುಳ್ಳೇದ ಗುಡ್ಡ).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಳೇದಗುಡ್ಡ ನಗರಕ್ಕೆ ಮಲಪ್ರಭಾ ನದಿಯಿಂದ ಕುಡಿಯುವ ನೀರು ಪೂರೈಕೆಯಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ ? ಬೇಸಿಗೆಯಲ್ಲಿ ಪ್ರತಿವರ್ಷ ಮಳೆಯ ಅಭಾವದಿಂದ ತೊಂದರೆಯಾಗುತ್ತದೆ ಪಂಪ್ ಹೌಸ್ ಹತ್ತಿರ ಆಸಂಗಿ ಎನ್ನುವಲ್ಲಿ ಒಡ್ಡಗಟ್ಟನ್ನು ಕಟ್ಟಿದರೆ ಈ ಸಮಸ್ಯೆ ದೂರವಾಗುತ್ತದೆಯಲ್ಲವೆ ?

ಆ) ಹಾಗಿದ್ದಲ್ಲಿ ಸದರಿ ಒಡ್ಡಗಟ್ಟನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಈ ಬಗ್ಗೆ ಈಗಾಗಲೇ ಗುಳೇದಗುಡ್ಡ ಪುರಸಭೆಯೊಂದಿಗೆ ಸಮಾಲೋಚಿಸುತ್ತಿದೆ.

ನೆಲಮಂಗಲ ವಿಧಾನ ಸಭೆ ಕ್ಷೇತ್ರದಲ್ಲಿರುವ ಉದ್ದಿಮೆಗಳ ಬಗ್ಗೆ

೧೭೬೪. ಶ್ರೀ ಬಿ ಗುರುಪ್ರಸಾದ್ (ನೆಲಮಂಗಲ).—ಮಾನ್ಯ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ವಿಧಾನಸಭೆ ಕ್ಷೇತ್ರದಲ್ಲಿ ಒಟ್ಟು ಇರುವ ಉದ್ದಿಮೆಗಳ ಸಂಖ್ಯೆ ಎಂದರೆ. — ೧) ಬೃಹತ್ ಉದ್ದಿಮೆಗಳು

೨) ಮಧ್ಯಮ ಉದ್ದಿಮೆಗಳು

೩) ಚಿಕ್ಕ ಪ್ರಮಾಣದ ಉದ್ದಿಮೆಗಳು

ಆ) ಮೇಲ್ಕಂಡ ಉದ್ದಿಮೆಗಳಲ್ಲಿ ಈಗ ಇರುವ ಕಾರ್ಮಿಕರ ಸಂಖ್ಯೆ ಎಷ್ಟು ?